

ಬೆಂಗಳೂರಿನಿಂದ ದೆಹಲಿಗೆ ಪ್ರಯಾಣಿಸುತ್ತಿದ್ದ ವಿಮಾನವುಅಪಘಾತವಾಗಿಒಂದುದಟ್ಟಅರಣ್ಯದಲ್ಲಿ ಬೀಳುತ್ತದೆ. ಈ ವಿಮಾನದಲ್ಲಿದ್ದ ಸುಮಾರುಜನರು ಕೈ ಕಾಲುಗಳನ್ನು ಕಳೆದುಕೊಂಡು ಮತ್ತೆ ಕೆಲವರು ಸಾವನ್ನಪ್ಪಿರುತ್ತಾರೆ. ಇನ್ನು ಕೆಲವರಿಗೆ ಸಣ್ಣ ಪುಟ್ಟ ಗಾಯಗಳಾಗಿರುತ್ತವೆ. ಅದೇ ವಿಮಾನದಲ್ಲಿ ಪ್ರಯಾಣಿಸುತ್ತಿದ್ದ ಸಾಮ್ರಾಟ್ ಎಂಬ ಬಾಲಕನಿಗೆ ಅನೇಕ ಗಾಯಗಳಾಗಿದ್ದು ಕಣ್ತೆರುದು ನೋಡುತ್ತಾನೆ. ವಿಮಾನವುದೂರದಲ್ಲಿ ಅನೇಕ ಭಾಗಗಳಾಗಿ ಬಿದ್ದಿರುತ್ತದೆ. ಜನರೆಲ್ಲ ಪ್ರಜ್ಞೆತಪ್ಪಿ ಮತ್ತೆ ಕೆಲವರುಅರೆ ಪ್ರಜ್ಞಾವಸ್ಥೆಯಲ್ಲಿ ನರಳಾಡುತ್ತಾ ಬಿದ್ದಿರುವುದನ್ನು ನೋಡಿದ ಸಾಮ್ರಾಟನಿಗೆದುಃಖವಾಗುತ್ತದೆ. ಆದರೂಧೈರ್ಯಗೆಡದೆಒಬ್ಬೊಬ್ಬರ ಬಳಿಯೂ ಹೋಗಿ ಎಬ್ಬಿಸಲು ಪ್ರಯತ್ನಿಸುತ್ತಾನೆ. ಒಬ್ಬಾತ ನೀರು ನೀರುಎಂದು ನಿಧಾನಧ್ವನಿಯಲ್ಲಿ ಕೇಳುತ್ತಾನೆ. ಆ ದಟ್ಟಅಡವಿಯಲ್ಲಿ ನೀರಿಗಾಗಿ ಹುಡುಕುತ್ತಾ ಸುತ್ತಮುತ್ತಲೂ ನೋಡುತ್ತಾನೆ. ಎಲ್ಲಿಯೂ ಸಿಗುವುದಿಲ್ಲ. ಮುಂದೆ ಸ್ವಲ್ಪದೂರ ನಡೆಯುತ್ತಾನೆ. ಯಾವುದೋಒಂದು ಮೂಲೆಯಲ್ಲಿ ಜುಳು ಜುಳು ಶಬ್ಧ ಕೇಳಿಸುತ್ತದೆ. ಸಾಮ್ರಾಟ್ಇದು ನೀರಿನ ಶಬ್ಧವೇ ಇರಬೇಕುಎಂದುಅದೇಕಡೆಗೆ ನಡೆಯುತ್ತಾನೆ. ಸಣ್ಣದಾದಒಂದುಕಾಲುವೆಯಲ್ಲಿ ನೀರು ಹರಿಯುತ್ತಿರುತ್ತದೆ. ಸಾಮ್ರಾಟ್ ನೀರಿಗೆ ಇಳಿದು ತಾನು ಧಣಿವಾರಿಸಿಕೊಂಡು ಅಪಘಾತಕ್ಕೊಳಗಾದ ಜನರಿಗೆ ನೀರನ್ನುತೆಗೆದುಕೊಂಡು ಹೋಗಲು ಯಾವ ಸಲಕರಣೆಯೂಇರುವುದಿಲ್ಲ.ತಾನು ಧರಿಸಿದ್ದ ಶರ್ಟ್‌ನ್ನುತೆಗೆದು ನೀರಿಗೆ ಮುಳುಗಿಸಿ ಒದ್ದೆ ಮಾಡಿಕೊಂಡು ನೀರನ್ನುತೆಗೆದುಕೊಂಡು ಹೋಗುತ್ತಾನೆ. ಸಣ್ಣಪುಟ್ಟ ಗಾಯಗಳಿಂದ ಪ್ರಜ್ಞೆ ಬಂದುಒಬ್ಬಾತ ನಾವೆಲ್ಲಿದ್ದೀವಿ? ಎಂದು ಕೇಳುತ್ತಾನೆ.

REDMI NOTE 6 PRO
MI DUAL CAMERA



ಸಾಮ್ರಾಟ್ :- ನನಗೂ ತಿಳಿಯುತ್ತಿಲ್ಲ ಆದರೆಇದುದಟ್ಟಕಾಡಿನಂತೆಕಾಣಿಸುತ್ತಿದೆ. ಒಬ್ಬಾತ ಭಯದಿಂದ ನಾವು ಹೇಗೆ ನಮ್ಮ ನಮ್ಮ ಮನೆಗೆ ಹೋಗುವುದು? ಇಲ್ಲಿಯಾವದಾರಿಯೂಕಾಣಿಸುತ್ತಿಲ್ಲವಲ್ಲ. ಎಂದು ಹೇಳುತ್ತಾನೆ.

ಮತ್ತೊಬ್ಬ :- ಏನಾದರೂ ಮಾರ್ಗೋಪಾಯಕಂಡು ಹಿಡಿಯಬೇಕುಇಲ್ಲವಾದಲ್ಲಿ ನಾವು ಯಾವುದಾದರೂ ಪ್ರಾಣಿಗೆಆಹಾರವಾಗುತ್ತೇವೆ.ಅಷ್ಟೆಎನ್ನುತ್ತಾನೆ. ಹೀಹೆ ಚಿಂತಿಸುತ್ತಿರುವಾಗ ಸಾಮ್ರಾಟ್ತನ್ನ ಗೆಳೆಯರನ್ನೆಲ್ಲ ನೆನಪಿಸಿಕೊಳ್ಳುತ್ತಾಒಮ್ಮೆತರಗತಿಯಲ್ಲಿ ಶಿಕ್ಷಕರು ತಿಳಿಸಿದ್ದ ದಿಕ್ಸೂಚಿ ಮತ್ತು ಪ್ರಯೋಗವು ನೆನಪಿಗೆ ಬರುತ್ತದೆ. (ನೆನಪಿನಲ್ಲಿ ಶಾಲೆಯದೃಶ್ಯ).



ಶಿಕ್ಷಕರು :- ಸುಮಾರುಕ್ರಿ.ಪೂ. 200 ರಲ್ಲಿಚೀನಾರಾಷ್ಟ್ರವು ಮೊಟ್ಟ ಮೊದಲು ದಿಕ್ಸೂಚಿಯನ್ನು ಉತ್ಪಾದಿಸಿತು. ದಿಕ್ಸೂಚಿಯು ಮ್ಯಾಗ್ನೆಟೈಡ್ ಸ್ವಾಭಾವಿಕವಾಗಿಕಾಂತೀಯಖನಿಜವನ್ನು ಹೊಂದಿರುತ್ತದೆ. 1050 ರ ಸುಮಾರಿಗೆ ಸಂರಚನೆಗಾಗಿ ದಿಕ್ಸೂಚಿಗಳ ಮೊದಲ ಬಳಕೆಯಾಯಿತು. ಇದು ಇಂದಿನ ಗುರುತು ಹಾಕದ ನೀರಿನ ಮೂಲಕ ಪರಿಶೋಧಕರಿಗೆ ಮಾರ್ಗದರ್ಶನ ನೀಡಿತು. ಮತ್ತು ಬೇಗ ತಮ್ಮ ಮನೆಗಳಿಗೆ ತಲುಪುವಂತೆ ಮಾಡಿತು. ಮಾಸಲೆಗಳು, ಚಿನ್ನ, ತಂತ್ರಜ್ಞಾನ ಮತ್ತುಜ್ಞಾನದಜಾಗತಿಕ ವ್ಯಾಪಾರವನ್ನು ಶಕ್ತಗೊಳಿಸಿತು.

ವಿದ್ಯಾರ್ಥಿ :- ದಿಕ್ಸೂಚಿಎಂದರೆ ಏನು ಸಾರ್?

REDMI NOTE 6 PRO
MI DUAL CAMERA

ಶಿಕ್ಷಕ :– ದಿಕ್ಸೂಚಿಒಂದು ಸಣ್ಣ ಸಾಧನವಾಗಿದ್ದು ದಿಕ್ಕನ್ನು ನಿರ್ಧರಿಸಲು ಬಳಸಲಾಗುತ್ತದೆ.

ಮೋನಿಷ (ವಿದ್ಯಾರ್ಥಿ) :– ಅದು ಹೇಗೆ ಸಾಧ್ಯ ಸಾರ್?

ಶಿಕ್ಷಕ :– ಭೂಮಿಯಕಾಂತಕ್ಷೇತ್ರವು ಧೃವಗಳಿಗಿಂತ ಭಿನ್ನವಾಗಿ ಪರಸ್ಪರಆಕರ್ಷಿತವಾಗಿದೆ. ಆದ್ದರಿಂದಕಾಂತದ ಸೂಚಿಯುಉತ್ತರಧ್ಯವವುಉತ್ತರ ದಿಕ್ಕಿನ ಕಡೆಗೆ ಸೂಚಿಸುತ್ತದೆ. ಮತ್ತುಅಯಸ್ಕಾಂತವುದಕ್ಷಿಣಧೃವವನ್ನು ಹೊಂದಿದ್ದು ಭೂಮಿಯದಕ್ಷಿಣವು ಭೂಮಿಯ ಮಧ್ಯಭಾಗದಲ್ಲಿರುವಅಯಸ್ಕಾಂತದಉತ್ತರಧೃವವನ್ನು ಹೊಂದಿರುತ್ತದೆ.

ಸಮೀರ್ :– ದಿಕ್ಸೂಚಿಯನ್ನುಎಲ್ಲರೂ ಬಳಸಬಹುದಾ ಸರ್?

ಶಿಕ್ಷಕ :– ಬಳಸಬಹುದುಆದರೆ ಪ್ರಮುಖವಾಗಿ ದಿಕ್ಸೂಚಿಎನ್ನುವುದು ನ್ಯಾವಿಗೇಷನ್ ವಿದ್ಯಾರ್ಥಿಗಳ ದೃಷ್ಟಿಕೋನಕ್ಕಾಗಿ ಬಳಸಲಾಗುತ್ತದೆ. ಇದು ಭೌಗೋಳಿಕ ದಿಕ್ಕಿನ ಗೆರೆಗಳಿಗೆ ಸಂಬಂಧಿಸಿದ ದಿಕ್ಕನ್ನುತೋರಿಸುತ್ತದೆ.

ಜಾನು :– ಹಾಗಿದ್ದರೆ ದಿಕ್ಸೂಚಿ ಹೇಗೆ ಕೆಲಸ ಮಾಡುತ್ತದೆ?

ಶಿಕ್ಷಕ :– ದಿಕ್ಸೂಚಿ ಸಲೀಸಾಗಿ ಕೆಲಸ ಮಾಡುತ್ತದೆ. ಏಕೆಂದರೆ ಅವುಗಳ ವಿನ್ಯಾಸವುಅಯಸ್ಕಾಂತವನ್ನು ಭೂಮಿಯಕಾಂತಕ್ಷೇತ್ರಕ್ಕೆ ಮುಖ್ಯವಾಗಿ ಪ್ರತಿಕ್ರಿಯಿಸಲು ಅನುವು ಮಾಡಿಕೊಡುತ್ತದೆ. ಭೂಮಿಯುತನ್ನದೇಆದಕಾಂತಕ್ಷೇತ್ರದದೈತ್ಯ ಮ್ಯಾಗ್ನೆಟಿನಂತಿದೆ. ದಿಕ್ಸೂಚಿಯಉತ್ತರತುದಿಯೂ ಭೂಮಿಯಕಾಂತೀಯಉತ್ತರ ಧೃವದೊಳಗೆ ಜೋಡಿಸಲು ಎಳೆಯಲಾಗುತ್ತದೆ. ಎಂದು ಬೋಧಿಸಿರುವುದನ್ನು ಪ್ರಯೋಗವನ್ನು ಮಾಡಿರುವುದನ್ನು ನೆನಪಿಸಿಕೊಂಡು ತಾನುಒಂದು ದಿಕ್ಸೂಚಿತಯಾರಿಸಬೇಕು ಎಂದುಕೊಳ್ಳುತ್ತಾ ಬಿದ್ದಿರುವ ವಿಮಾನದ ಬಳಿ ಹೋಗುತ್ತಾನೆ.



ಅಲ್ಲಿಒಂದು ಮ್ಯಾಗ್ನೆಟಿನತುಂಡು ಸಿಗುತ್ತದೆ. ಸೂಜಿಯಂತಿರುವ ನಿಕ್ಕಲ್‌ತುಂಡನ್ನುತೆಗೆದುಕೊಂಡು ಆ ನಿಕ್ಕಲ್ ನ ತುಂಡಿಗೆಅಯಸ್ಕಾಂತವನ್ನುಉಜ್ಜುತ್ತನೆ. ಅದುಕಾಂತೀಯಗುಣ ಪಡೆದುಕೊಳ್ಳುತ್ತದೆ.ಇದರಿಂದ ದಿಕ್ಕನ್ನು ತಿಳಿಯಬಹುದೆಂದು ತಿಳಿದು ಅಪಘಾತದಿಂದ ಪಾರಾಗಿದ್ದ ಆ ಮೂವರು ವ್ಯಕ್ತಿಗಳನ್ನು ಕರೆದುಕೊಂಡು ಸಣ್ಣದಾಗಿ ಹರಿಯುತ್ತಿದ್ದಕಣಿವೆಯ ಮಾರ್ಗವಾಗಿ ನಡೆಯುತ್ತಾರೆ. ದೊಡ್ಡದಾದ ನದಿ ಸಿಗುತ್ತದೆ. ಅಲ್ಲಿಯೇಯಾವುದಾದರೂ ಹಡಗು ಬರಬಹುದೇನೋಅದರಮೂಲಕವಾದರೂ ನಾವು

REDMI NOTE 6 PRO
MI DUAL CAMERA

ನಮ್ಮೂರಿಗೆ ಹೋಗಬಹುದೆಂದು ನದಿಯದಡದಲ್ಲಿಯೇಕಾಯುತ್ತಾ ಕುಳಿತಿರುತ್ತಾರೆ. ಅದರೆಯಾವ ಹಡಗು ಬರುವುದಿಲ್ಲ.



ಏನು ಮಾಡುವುದೆಂದು ಚಿಂತಿಸಿ ತಾವೇ ಸ್ವತಃಒಂದುದೋಣಿಯನ್ನು ಮಾಡಲು ನಿರ್ಧರಿಸಿ ಕಾಡಿನಲ್ಲಿದ್ದ ಬಿದುರಿನ ಬೊಂಬುಗಳು ಮತ್ತುಕಟ್ಟಿಗೆ ಇವುಗಳಿಂದ ಒಂದು ಹಡಗನ್ನು ತಯಾರಿಸಿಕೊಳ್ಳುತ್ತಾರೆ. ಹೇಗೋ ಸರಳ ದಿಕ್ಸೂಚಿಯನ್ನು ತಯಾರಿಸಿ ಅದರ ಸಹಾಯದಿಂದ ದಿಕ್ಕನ್ನು ತಿಳಿದುಕೊಂಡು ತಮ್ಮದೋಣಿಯಲ್ಲಿ ಪ್ರಯಾಣಿಸುತ್ತಾರೆ. ಹೀಗೆ ಬಹಳ ದೂರ ಪ್ರಯಾಣಿಸಿದಾಗ ಒಂದುಊರು ಸಿಗುತ್ತದೆ.ಅಲ್ಲಿಗೆತಲುಪುತ್ತಾರೆ. ಆ ಊರಿನ ಪ್ರಮುಖರಿಗೆ ವಿಮಾನಅಪಘಾತದ ಬಗ್ಗೆ ತಿಳಿಸುತ್ತಾರೆ. ಅಲ್ಲಿನಜನರುಅವರ ಕಷ್ಟಗಳನ್ನು ಕೇಳಿ ಅಧಿಕಾರಿಗಳ ಬಳಿ ಹೋಗಿ ಅವರ ಬಳಿ ದೂರು ನೀಡುತ್ತಾರೆ. ಅಧಿಕಾರಿಗಳು ವಿಷಯ ತಿಳಿಯುತ್ತಿದ್ದಂತೆ ಪೋಲೀಸರು, ಸೈನಿಕರುಎಲ್ಲರೂ ಆ ಸ್ಥಳಕ್ಕೆ ಹೋಗಿ ಅಪಘಾತಕ್ಕೊಳಗಾಗಿ ಸಾವು ನೋವುಗಳಿಂದ ಹಸಿವಿನಿಂದ ಬಳಲುತ್ತಿದ್ದ ಅನೇಕ ಜನರನ್ನು ರಕ್ಷಿಸಿ ಆಸ್ಪತ್ರೆಗೆ ಸೇರಿಸಿ ಔಷದೋಪಚಾರಗಳನ್ನು ಕೊಡಿಸುತ್ತಾರೆ. ಇದರಿಂದಅನೇಕ ಜನರು ಪ್ರಾಣಾಪಾಯದಿಂದ ಪಾರಾಗುತ್ತಾರೆ. ಸಾಮ್ರಾಟ್‌ನಧೈರ್ಯ ಮತ್ತು ದಿಟ್ಟತನವನ್ನು ಮೆಚ್ಚಿಅಲ್ಲಿನ ಅಧಿಕಾರಿಗಳು ಬಹುಮಾನವನ್ನು ನೀಡಿ ಪ್ರಶಂಶಿಸುತ್ತಾರೆ.



REDMI NOTE 6 PRO
MI DUAL CAMERA